ಪಿ.ಡ.ಬ್ಲೂ–೩

ದಿ: ೨೩.೦೯.೨೦೨೩ ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ, ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು**: ಪ್ರತಿವಾದಿ ಪರ ಶ್ರೀ ಹೆಚ್.ಎಸ್.ಆರ್. ವಕೀಲರಿಂದ,

ನನಗೆ ಈ ಪ್ರಕರಣದ ಸಂಪೂರ್ಣ ಮಾಹಿತಿ ಇರುತ್ತದೆ. ಈ ಪ್ರಕರಣವನ್ನು ನಾರಾಯಣಪ್ಪರವರು ನಂಜಪ್ಪ ಇವರಿಗೆ ತೊಂದರೆ ಕೊಟ್ಟಿದ್ದರಿಂದ ದಾಖಲಿಸಿದ್ದಾರೆ. ವಾದಿ ಮತ್ತು ಪ್ರತಿವಾದಿ ಸಿದ್ದನಹಳ್ಳಿಯ ವಾಸಿಗಳು. ಪ್ರತಿವಾದಿ ಮತ್ತು ಅವರ ಕುಟುಂಬದ ಸದಸ್ಯರ ಪರಿಚಯ ಇದೆ.

ಪ್ರತಿವಾದಿಯ ತಂದೆಯ ಹೆಸರು ಕೆಂಚ ಮುನಿಯಪ್ಪ @ ಅಪ್ಪಯಣ್ಣ ಎಂದರೆ ಸರಿ. ನಮ್ಮ ತಂದೆ ಈ ಪ್ರಕರಣದಲ್ಲಿ ಸಲ್ಲಿಸಿರುವ ಸಾಕ್ಷಿ ವಿಚಾರಣೆ ಬಗ್ಗೆ ತಿಳಿದುಕೊಂಡಿದ್ದೇನೆ. ನಮ್ಮ ತಂದೆಯ ಪಾಟೀ ಸವಾಲು ಸಾಕ್ಷಿಯನ್ನು ಸಹ ತಿಳಿದುಕೊಂಡಿದ್ದೇನೆ. ರಾಮಣ್ಣ ಬಿನ್ ಕೆಂಚಮುನಿಯಪ್ಪ ಎನ್ನುವವರು ಸಿದ್ದನಹಳ್ಳಿ ಗ್ರಾಮದವರು. ರಾಮಣ್ಣ ಇವರು ನಮ್ಮ ತಂದೆಯ ಸೋದರಮಾವ. ರಾಮಣ್ಣ ಮತ್ತು ಅವರ ತಂಗಿ ನಂಜಮ್ಮ ಇಬ್ಬರು ಅಣ್ಣ ತಂಗಿಯರು. ರಾಮಣ್ಣ ಇವರಿಗೆ ಅವರು ಜೀವಂತ ಕಾಲದಲ್ಲಿ ಒಂದೇ ಆಸ್ತಿ ಇತ್ತು.

ರಾಮಣ್ಣ ಇವರು ಅವರ ಹಳೆಯ ಮನೆ ಬಿಟ್ಟು ನಮ್ಮ ಮನೆಯಲ್ಲಿಯೇ ಇರುತ್ತಿದ್ದರು. ಹಳೆ ಮನೆ ಈಗ ರಾಮಣ್ಣನವರ ಚಿಕ್ಕಮ್ಮ ಕೆಂಪಕ್ಕ ಅವರ ಹೆಸರಿನಲ್ಲಿತ್ತು. ಸಾಕ್ಷಿಯು ಮುಂದುವರೆದು ಕೆಂಪಕ್ಕರವರು ಮಾರಾಟ ಮಾಡಿದ್ದರಿಂದ, ರಾಮಣ್ಣ ತಮ್ಮ ಮನೆಗೆ ಬಂದರು ಎನ್ನುತ್ತಾರೆ. ರಾಮಣ್ಣ ಮತ್ತು ನಂಜಮ್ಮ ಇವರು ಅಣ್ಣ ತಂಗಿ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿದ್ದೇನೆ.

ರಾಮಣ್ಣ ಇವರು ದಾವಾ ಆಸ್ತಿಯನ್ನು ಕ್ರಯಕ್ಕೆ ದಿ: ೧೨.೦೨.೧೯೪೪ರಲ್ಲಿ ಪಡೆದುಕೊಂಡಿದ್ದರು. ದಾವಾ ಆಸ್ತಿಯ ಚಕ್ಕುಬಂದಿ ಪೂ–ತೊಗಟರ ಸೀತಾ ರಾಮಯ್ಯನ ತೋಟ, ಪ–ತೊಗಟರ ಪಾಪಣ್ಣನ ತೋಟ, ಉ–ಕೆಂಚಮುನಿಯಪ್ಪನ ಹೊಲ, ದ–ಆವಲಪ್ಪನ ತೋಟ ಇರುತ್ತದೆ. ದಾವಾ ಆಸ್ತಿಯಲ್ಲಿ ಆ ಚಕ್ಕುಬಂದಿ ಮತ್ತು ಇರುವ ಚಕ್ಕುಬಂದಿಯನ್ನು ತೋರಿಸಿದ್ದೇನೆ. ಈಗ ದಾವಾ ಆಸ್ತಿಯ ಪೂ–ಕೆ.ನಂಜುಂಡಪ್ಪ ರವರ ಜಮೀನು, ಪ–ಎಸ್ ಕೆಂಪಣ್ಣನವರ ಜಮೀನು, ಉ–ರಾಜಕಾಲುವೆ ಮತ್ತು ನಂಜಪ್ಪ, ದ–ಎಸ್.ಕೆಂಪಣ್ಣನ ಜಮೀನು ಇರುತ್ತದೆ. ತೊಗಟರ ಸೀತಾರಾಮಯ್ಯನವರ ಕಡೆಯಿಂದ ಕೆ.ನಂಜುಂಡಪ್ಪ ಕ್ರಯಕ್ಕೆ ಪಡೆದಿದ್ದಾರೆ, ಆ ಕುರಿತು ದಾಖಲೆಯನ್ನು ಹಾಜರುಪಡಿಸುತ್ತೇನೆ. ಎಸ್.ಕೆಂಪಣ್ಣ ರವರು ಕ್ರಯಕ್ಕೆ ಪಡೆದಿರುವ ಕುರಿತು ಕ್ರಯಕ್ಕೆ ಹಾಜರುಪಡಿಸುತ್ತೇನೆ.

ಉತ್ತರಕ್ಕೆ ಕೆಂಚಮುನಿಯಪ್ಪನ ಆಸ್ತಿ ಇದ್ದು, ಅದು ರಾಜಕಾಲುವೆ ಆಗಿ ಯಾವಾಗ ಪರಿವರ್ತನೆ ಆಯಿತು ಎಂದರೆ ಸಾಕ್ಷಿಯು ಅದು ಬಹಳ ವರ್ಷಗಳ ಹಿಂದಿನಿಂದಲೂ ಇದೆ ಎನ್ನುತ್ತಾರೆ. ನಮ್ಮ ಜಮೀನಿಗೆ ಯಾವುದಾದರು ಕೆರೆ ಕಟ್ಟೆ ಇರುವುದಿಲ್ಲ. ಆವಲಪ್ಪರವರು ದಕ್ಷಿಣದ ಕಡೆಗೆ ಕೆಂಪಣ್ಣನಿಗೆ ಮಾರಾಟ ಮಾಡಿರುವ ಕುರಿತು ಕ್ರಯ ಪತ್ರ ಹಾಜರುಪಡಿಸುತ್ತೇನೆ. ದಾವಾ ಆಸ್ತಿಯಲ್ಲಿ ಕೊಳವೆ ಬಾವಿ ಅಥವಾ ಬಾವಿ ಆಗಲಿ ಇಲ್ಲ.

ನಾನು ಪಿ.ಯು.ಸಿ ಓದಿದ್ದೇನೆ. ರಾಮಣ್ಣ ರವರು ೧೯೯೦ ವರೆಗೆ ಬದುಕಿರುವ ಕುರಿತು ದಾಖಲೆಗಳೊಂದಿಗೆ ಸಾಕ್ಷಿ ಮಾಡಿಸುತ್ತೇನೆ. ಸಾಮಾನ್ಯವಾಗಿ ಜಮೀನು ಅಥವಾ ಸೈಟು ಖರೀದಿಸಿದರೆ ಅವರ ಹೆಸರಿಗೆ ಖಾತೆ ಬದಲಾವಣೆ ಆಗುತ್ತದೆ ಎಂದರೆ ಸರಿ. ನಿಪಿ.೭ ಪಹಣಿ ಪತ್ರಿಕೆಯಲ್ಲಿ ೧೯೬೮–೬೯ನೇ ಸಾಲಿನಲ್ಲಿ ರಾಮಣ್ಣ ಬಿನ್ ಕೆಂಚ ಮುನಿಯಪ್ಪ ಇವರ ಹೆಸರು ನಮೂದಿದೆ ಎಂದರೆ ಸರಿ ಮತ್ತು ೧೯೭೧–೭೨,೧೯೭೨–೭೩ ನೇ ಸಾಲಿನಲ್ಲಿ ಕೆಂಚ ಮುನಿಯಪ್ಪ ಇವರ ಹೆಸರು ದಾಖಲಿದೆ ಎಂದರೆ ಸರಿ. ಕಾಲಂ ನಂ.೧೧ರಲ್ಲಿ ಕ್ರಯ ಎಂದು ನಮೂದಿದೆ ಎಂದರೆ ಸರಿ. ೧೯೪೪ ರಲ್ಲಿ ಕ್ರಯಕ್ಕೆ ರಾಮಣ್ಣ ಅವರು ಕ್ರಯಕ್ಕೆ ಪಡೆದ ನಂತರ ೧೯೬೮–೬೯ ವರೆಗೆ ಯಾರ ಹೆಸರಿನಲ್ಲಿ ಆರ್.ಆರ್. ಮತ್ತು ಐ.ಆರ್. ಇತ್ತು ಎಂದು ನನಗೆ ಗೊತ್ತಿಲ್ಲ. ೧೯೪೪ ರಿಂದ ೧೯೬೮–೬೯ ವರೆಗೆ ಈ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಕಂದಾಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ.

ನಿಪಿ.೬ ರಲ್ಲಿ ೧೯೭೩–೭೪ ರಿಂದ ೧೯೭೯–೮೦ ವರೆಗೆ ಸದರಿ ಆಸ್ತಿಯು ಕೆಂಚ ಮುನಿಯಪ್ಪನ ಹೆಸರಿನಲ್ಲಿರುತ್ತದೆ. ಕಾಲಂ ನಂ.೧೨ ರಲ್ಲಿ ನಮೂದಿಸಿದ ಕೆಂಚಮುನಿಯಪ್ಪ ಇವರು ರಾಮಣ್ಣನ ತಂದೆ. ಸಾಕ್ಷಿಯು ಮುಂದುವರೆದು ಕೆಂಚಮುನಿಯಪ್ಪನವರು ೧೯೭೨ ರಲ್ಲಿ ತೀರಿಕೊಂಡಿದ್ದಾರೆ, ಆದರು ದಾಖಲೆ ಅವರ ಹೆಸರಿನಲ್ಲಿ ಮುಂದುವರೆದಿರುತ್ತದೆ ಎನ್ನುತ್ತಾರೆ. ಅವರ ಹೆಸರನ್ನು ತೆಗೆಯಿಸಲು ನಾನು ಯಾವುದೇ ಅರ್ಜಿ ಸಲ್ಲಿಸಿಲ್ಲ. ರಾಮಣ್ಣ ಅವರು ತೀರಿ ಹೋದ ಮೇಲೆ ಅವರ ಮಗನ ಹೆಸರು ಕೆಂಚಮುನಿಯಪ್ಪ ಅವರ ಹೆಸರಿನಲ್ಲಿ ದಾಖಲಾಗಿದೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ತಂದೆ ತೀರಿಕೊಂಡ ನಂತರ ಕಂದಾಯ ದಾಖಲೆಗಳು ಅವರ ಮಕ್ಕಳ ಹೆಸರಿಗೆ ಆಗುತ್ತದೆ ಎಂದರೆ ಸಾಕ್ಷಿಯು ದಾಖಲೆಗಳನ್ನು ಮಾಡಿಕೊಂಡರೆ ಆಗುತ್ತದೆ ಎನ್ನುತ್ತಾರೆ. ೧೯೮೦–೮೧ ರಿಂದ ೨೦೦೧ನೇ ಸಾಲಿನವರೆಗೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಪಹಣಿಗಳು ಹಾಜರುಪಡಿಸಲು ತೊಂದರೆ ಇಲ್ಲ. ರಾಮಣ್ಣರವರು ೧೯೬೮ ರಲ್ಲಿ ಮೃತ ಆದ ನಂತರ ಅವರ ಮಗ ಕೆಂಚಮುನಿಯಪ್ಪ ರವರ ಹೆಸರು ೨೦೦೧–೦೨ ನೇ ಸಾಲಿನವರೆಗೆ ನಮೂದಾಗಿದೆ ಎಂದರೆ ಸರಿಯಲ್ಲ.

( ಈ ಹಂತದಲ್ಲಿ ಶ್ರೀ ಹೆಚ್.ಎಸ್.ಆರ್.ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

**ಓ.ಹೇ.ಕೇ.ಸ.ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ಹೊಸಕೋಟೆ.**